# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 441 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 15.09.2022 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಅಬಕಾರಿ ಇಲಾಖೆಯಿಂದ ಬರುವ ವರಮಾನಕ್ಕೆ ನಿಗಧಿಪಡಿಸಲಾದ ಗುರಿ ಎಷ್ಟು ಮತ್ತು ಸರ್ಕಾರಕ್ಕೆ ಬಂದಿರುವ ವರಮಾನ ಎಷ್ಟು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು) | ಅಬಕಾರಿ ಇಲಾಖೆಯು ಕಳೆದ ಐದು ವರ್ಷಗಳಲ್ಲಿ ಸಂಗ್ರಹಿಸಿದ ಅಬಕಾರಿ ರಾಜಸ್ವದ (ವರಮಾನ) ವಿವರಗಳು ಕೆಳಕಂಡಂತಿದೆ. (ರೂ.ಕೋಟಿಗಳಲ್ಲಿ) |

| ಕ್ರ. ಸಂ. | ವರ್ಷ | ನಿಗಧಿಪಡಿಸಲಾದ ಗುರಿ | ಸಂಗ್ರಹಿಸಲಾದ ಅಬಕಾರಿ ರಾಜಸ್ವ | ಶೇ. ಬೆಳವಣಿಗೆ (ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ) |
|---|---|---|---|---|
| 1. | 2017–18 | 17,600 | 17,948.51 | 8.89% |
| 2. | 2018–19 | 19,750 | 19,943.93 | 11.12% |
| 3. | 2019–20 | 20,950 | 21,583.95 | 8.22% |
| 4. | 2020–21 | 22,700 | 23,332.10 | 8.10% |
| 5. | 2021–22 | 24,580 | 26,377.68 | 13.05% |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯದಲ್ಲಿ ಎಷ್ಟು ವಿಧದ ಮದ್ಯದಂಗಡಿಗಳಿಗೆ ಪರವಾನಿಗೆಗಳನ್ನು ನೀಡಲಾಗುತ್ತಿದೆ; ಈ ಪರವಾನಿಗೆ ಪಡೆಯಲು ಇರುವ ಮಾನದಂಡಗಳೇನು; | 1992ನೇ ಸಾಲಿನಿಂದ ಹೊಸದಾಗಿ ಸಿಎಲ್–2, ಸಿಎಲ್–9 ಸನ್ನದನ್ನು ನೀಡಲು ನಿರ್ಬಂಧವಿರುವುದರಿಂದ ಅಬಕಾರಿ ಇಲಾಖೆಯಿಂದ ಯಾವುದೇ ಹೊಸ ಸಿಎಲ್–2 ಮತ್ತು ಸಿಎಲ್–9 ಸನ್ನದಿಗೆ ಮಂಜೂರಾತಿ ನೀಡಲಾಗುತ್ತಿಲ್ಲ. ಪ್ರಸ್ತುತ ನೀಡಲಾಗುತ್ತಿರುವ ಸನ್ನದುಗಳ ವಿವರ ಕೆಳಕಂಡಂತಿದೆ. |

ಮದ್ಯದಂಗಡಿ ಪರವಾನಿಗೆ ಪಡೆದವರು ಮದ್ಯದಂಗಡಿ ಹಾಗೂ ಬಾರ್‌ಗಳಲ್ಲಿ ನಿಯಮಾವಳಿಗಳ ಸೂಚನಾ ಫಲಕಗಳನ್ನು ಪ್ರದರ್ಶಿಸಲಾಗುತ್ತಿದೆಯೇ;

ಖಾಸಗಿ ಬಾರ್ ಮತ್ತು ವೈನ್ ಶಾಪ್ ಮಾಲೀಕರು ಮನಬಂದಂತೆ ಮದ್ಯದ ದರ ಹೆಚ್ಚಿಗೆ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

| | | |
|---|---|---|
| 1 | ಸಿಎಲ್– 2 | ಚಿಲ್ಲರೆ ಮದ್ಯ ಮಾರಾಟ ಸನ್ನದು. |
| 2 | ಸಿಎಲ್– 4 | ಕ್ಲಬ್‌ಗಳಿಗೆ ನೀಡುವ ಸನ್ನದು. |
| 3 | ಸಿಎಲ್– 5 | ಅಪರೂಪಕ್ಕೊಮ್ಮೆ ನೀಡುವ ಸನ್ನದು. |
| 4 | ಸಿಎಲ್– 6 | ವಿಶೇಷ ಸನ್ನದು. |
| 5 | ಸಿಎಲ್– 6A | ತಾರಾ ಹೋಟೆಲ್‌ಗಳಿಗೆ ನೀಡುವ ಸನ್ನದು. |
| 6 | ಸಿಎಲ್– 7 | ಬೋರ್ಡಿಂಗ್ ಮತ್ತು ಲಾಡ್ಜಿಂಗ್‌ಗಳಿಗೆ ನೀಡುವ ಸನ್ನದು. |
| 7 | ಸಿಎಲ್– 7A | ಪ್ರವಾಸೋದ್ಯಮ ಹೋಟೆಲ್‌ಗಳಿಗೆ ನೀಡುವ ಸನ್ನದು. |
| 8 | ಸಿಎಲ್– 7B | ಪ್ರವಾಸೋದ್ಯಮ ಹೋಟೆಲ್‌ಗಳಿಗೆ ನೀಡುವ ಬಿಯರ್ ಬಾರ್ ಸನ್ನದು. |
| 9 | ಸಿಎಲ್– 7C | ಕೇಂದ್ರ ಮತ್ತು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಡಿಯ ರೈಲುಗಳಿಗೆ ನೀಡುವ ಸನ್ನದು. |
| 10 | ಸಿಎಲ್– 8 | ಮಿಲಿಟರಿ ಕ್ಯಾಂಟೀನ್ ಸನ್ನದು. |
| 11 | ಸಿಎಲ್– 8A | ಮಿಲಿಟರಿ ಕ್ಯಾಂಟೀನ್ ಉಗ್ರಾಣಗಳಿಗೆ ನೀಡುವ ಸನ್ನದು. |
| 12 | ಸಿಎಲ್– 8B | ಬಿಎಸ್‌ಎಫ್ ಅಥವಾ ಪ್ಯಾರಾಮಿಲಿಟರಿ ಫೋರ್ಸ್‌ಗಳಿಗೆ ನೀಡುವ ಸನ್ನದು. |
| 13 | ಸಿಎಲ್– 9 | ಬಾರ್ ಮತ್ತು ರೆಸ್ಟೋರೆಂಟ್ ಸನ್ನದು. |
| 14 | ಸಿಎಲ್– 10 | ಹರಾಜು ಪ್ರಕ್ರಿಯೆ ಸನ್ನದು. |
| 15 | ಸಿಎಲ್– 11 | ಡಿಸ್ಟ್ರಿಬ್ಯೂಟರ್ ಸನ್ನದು. |
| 16 | ಸಿಎಲ್– 11B | ವಶಪಡಿಸಿಕೊಂಡಿರುವ ಮದ್ಯ ಮಾರಾಟ ಸನ್ನದು. |
| 17 | ಸಿಎಲ್– 11C | ಸರ್ಕಾರಿ ಸ್ವಾಮ್ಯದ ಚಿಲ್ಲರೆ ಮದ್ಯ ಮಾರಾಟ ಸನ್ನದು(ಎಂ.ಎಸ್.ಐ.ಎಲ್). |
| 18 | ಸಿಎಲ್– 12 | ಬಾಟಲಿಯಲ್ಲಿ ಸೇಂದಿ ಮಾರಾಟ ಮಾಡುವ ಸನ್ನದು. |
| 19 | ಸಿಎಲ್– 13 | ಸಾರಾಯಿ ಡಿಪೋ ಸನ್ನದು. |
| 20 | ಸಿಎಲ್– 16 | ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಡ್ಯೂಟಿಫ್ರಿ ಶಾಪ್‌ಗಳಿಗೆ ನೀಡುವ ಸನ್ನದು. |

| | | |
|---|---|---|
| 21 | ಸಿಎಲ್– 17 | ದೇಶಿಯ ವಿಮಾನ ನಿಲ್ದಾಣದ ಪ್ರಯಾಣಿಕರ ರಿಫ್ರೆಶ್‌ಮೆಂಟ್ ರೂಮ್‌ಗಳಿಗೆ ನೀಡುವ ಸನ್ನದು. |
| 22 | ಸಿಎಲ್– 18 | ಅಂತರದೇಶಿಯ ವಿಮಾನ ನಿಲ್ದಾಣದ ಪ್ರಯಾಣಿಕರ ರಿಫ್ರೆಶ್‌ಮೆಂಟ್ ರೂಮ್‌ಗಳಿಗೆ ನೀಡುವ ಸನ್ನದು. |

ಸಿಎಲ್–4, ಸಿಎಲ್–6ಎ, ಸಿಎಲ್–7, ಸಿಎಲ್–8, ಸಿಎಲ್–7ಎ, ಸಿಎಲ್–11ಸಿ, ಫಾರ್ಮ್ ಸಿಎಲ್–16, ಫಾರ್ಮ್ ಸಿಎಲ್–17 ಮತ್ತು ಫಾರ್ಮ್ ಸಿಎಲ್–18 ಸನ್ನದುಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ–3(11–ಸಿ), 8, 8(ಎ) ರಲ್ಲಿ ನಿಗಧಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ–5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಸ್ಥಳೀಯ ಸಂಸ್ಥೆಗಳು, ಹಾಗೂ ಪತ್ರಾಂಕಿತ ಅಧಿಕಾರಿಗಳ ಕೇಂದ್ರ/ರಾಜ್ಯ ಸರ್ಕಾರಿ ಕಛೇರಿಗಳು ಇರುವಂತಿಲ್ಲ. ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:12164–12166/2016ರ ದಿನಾಂಕ:31–03–2017ರಲ್ಲಿ ಆದೇಶಿಸಿದಂತೆ 20,000ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್

| | | |
|---|---|---|
| | | ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ:10243/2017ರಲ್ಲಿನ ದಿನಾಂಕ: 11.07.2017ರ ಆದೇಶದಲ್ಲಿ ನೀಡಿದ ಸ್ಪಷ್ಟೀಕರಣದಂತೆ, ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ಹಾದು ಹೋಗುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿರುವ ಸನ್ನದುಗಳನ್ನು ನಿಯಮಾನುಸಾರ ನವೀಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಸರ್ಕಾರದ ಪತ್ರ ಸಂಖ್ಯೆ:ಆಇ 36 ಇಡಬ್ಲ್ಯೂಪಿ 2018, ದಿನಾಂಕ:06.08.2020ರಲ್ಲಿ 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತಿ / ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ವಿನಾಯಿತಿಯನ್ನು ನೀಡಲಾಗಿದೆ.<br><br>ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ:ಆಇ 33 ಇಎಫ್ಎಲ್ 2021, ದಿನಾಂಕ:19.01.2022ರಲ್ಲಿ ಸರ್ಕಾರದ ರಾಜಸ್ವ ಹಿತದೃಷ್ಟಿಯಿಂದ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹೊಸದಾಗಿ ಮಂಜೂರು ಮಾಡುವ ಸಿಎಲ್-7(ಎ) ಸನ್ನದುಗಳಿಗೂ ವಿಸ್ತರಿಸಿ ಅನುಮತಿಯನ್ನು ನೀಡಲಾಗಿದೆ. |

| | | |
|---|---|---|
| | | ಮದ್ಯದಂಗಡಿ ವರ್ಗಕ್ಕೆ ಸೇರುವ ಸಿಎಲ್–2 ಮತ್ತು ಸಿಎಲ್–11ಸಿ ಸನ್ನದುಗಳಲ್ಲಿ ಸನ್ನದಿಗೆ ವಿಧಿಸಿರುವ ಷರತ್ತಿನನ್ವಯ ನಿಗಧಿಪಡಿಸಿರುವ ಗರಿಷ್ಠ ಮಾರಾಟ ಬೆಲೆಯಲ್ಲಿಯೇ ಮದ್ಯ ಮಾರಾಟ ಮಾಡಬೇಕಾಗಿರುವುದರಿಂದ ದರಪಟ್ಟಿ, ಸನ್ನದು ಪ್ರತಿ, ಸನ್ನದಿನ ನಾಮಫಲಕವನ್ನು ಪ್ರದರ್ಶಿಸಲಾಗುತ್ತಿದೆ.<br><br>ಮದ್ಯದಂಗಡಿ ವರ್ಗಕ್ಕೆ ಸೇರುವ ಸಿಎಲ್–2 ಮತ್ತು ಸಿಎಲ್–11ಸಿ ಸನ್ನದುಗಳನ್ನು ಹೊರತುಪಡಿಸಿ ಉಳಿದ ಇತರೆ ಸನ್ನದುಗಳಲ್ಲಿ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿನ ಬೆಲೆ ಮಾರಾಟಕ್ಕೆ ಯಾವುದೇ ನಿರ್ಬಂಧವಿರುವುದಿಲ್ಲ. ಸದರಿ ಸನ್ನದುಗಳಲ್ಲಿ ಸನ್ನದು ಪ್ರತಿ, ಸನ್ನದಿನ ನಾಮಫಲಕವನ್ನು ಪ್ರದರ್ಶಿಸಲಾಗುತ್ತಿದೆ.<br><br>ಎಂ.ಎಸ್.ಐ.ಎಲ್ (ಸಿಎಲ್–11ಸಿ) ಮತ್ತು ವೈನ್ ಶಾಪ್ (ಸಿಎಲ್–2) ಸನ್ನದುದಾರರು ಗರಿಷ್ಟ ಮಾರಾಟ ಬೆಲೆಗಿಂತ ಹೆಚ್ಚಿನ ದರಕ್ಕೆ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಇ) | ಬಂದಿದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಯಾವ ವರ್ಗದ ಪರವಾನಿಗೆಗಳಿಗೆ ಗರಿಷ್ಟ ಮಾರಾಟ ದರದ ಮೇಲೆ ಎಷ್ಟು ಪ್ರತಿಶತಃ ದರ ಹೆಚ್ಚಳ ಮಾಡಲು ಸರ್ಕಾರದ ನಿಯಮಾವಳಿಯಲ್ಲಿ ಅವಕಾಶವಿದೆ; (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು) | ಸಿಎಲ್–2 ಹಾಗೂ ಸಿಎಲ್–11(ಸಿ) ಸನ್ನದುಗಳಲ್ಲಿ ಕಡ್ಡಾಯವಾಗಿ ಗರಿಷ್ಠ ಮಾರಾಟ ಬೆಲೆಯಲ್ಲಿಯೇ ಮದ್ಯವನ್ನು ಮಾರಾಟ ಮಾಡಬೇಕೆಂಬ ನಿಯಮವಿರುತ್ತದೆ. ಸದರಿ ಸನ್ನದುಗಳನ್ನು ಹೊರತುಪಡಿಸಿ ಉಳಿದ ಇತರೆ ಸನ್ನದುಗಳಲ್ಲಿ ಗರಿಷ್ಟ ಮಾರಾಟ ಬೆಲೆಯಲ್ಲಿ ಮದ್ಯವನ್ನು ಮಾರಾಟ ಮಾಡಬೇಕೆಂಬ ಬಗ್ಗೆ ನಿಯಮಗಳು ಇರುವುದಿಲ್ಲ. ಕಳೆದ ಐದು ವರ್ಷಗಳಲ್ಲಿ ಗರಿಷ್ಟ ಮಾರಾಟ ಬೆಲೆಗಿಂತಲೂ ಹೆಚ್ಚಿನ ಬೆಲೆಗೆ ಮದ್ಯವನ್ನು ಮಾರಾಟ ಮಾಡುತ್ತಿದ್ದ ಸಿಎಲ್–2 ಹಾಗೂ ಸಿಎಲ್–11(ಸಿ) ಸನ್ನದುಗಳ ವಿರುದ್ಧ ದಾಖಲಿಸಿದ ಪ್ರಕರಣಗಳ ವಿವರ ಕೆಳಕಂಡಂತಿದೆ. |

| ಕ್ರಸಂ | ಅಬಕಾರಿ ಸಾಲು (ಜುಲೈ ಇಂದ ಜೂನ್ ಮಾಹೆಯವರೆಗೆ) | ದಾಖಲಿಸಿದ ಪ್ರಕರಣಗಳ ಸಂಖ್ಯೆ |
|---|---|---|
| 1 | 2017–18 | 4319 |
| 2 | 2018–19 | 2522 |

| | | |
|---|---|---|
| | | <table><tr><td>3</td><td>2019–20</td><td>2210</td></tr><tr><td>4</td><td>2020–21</td><td>2130</td></tr><tr><td>5</td><td>2021–22</td><td>2246</td></tr></table> |
| ಈ) | ಉತ್ತರ ಕರ್ನಾಟಕ ಗಡಿ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಮತ್ತು ಸೇವನೆ ಅವ್ಯಾಹತವಾಗಿ ನಡೆಯುತ್ತಿರುವುದು ಹಾಗೂ ಕಳ್ಳಭಟ್ಟಿ ಕುಡಿದು ಅನೇಕರು ಪ್ರಾಣ ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಉತ್ತರ ಕರ್ನಾಟಕ ಗಡಿ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಮತ್ತು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಯಾವುದೇ ಪ್ರಾಣ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಉ) | ಬಂದಿದ್ದಲ್ಲಿ, ಇಂತಹ ಕಳ್ಳಭಟ್ಟಿ ತಯಾರಿಸುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; ಕಳೆದ ಐದು ವರ್ಷಗಳಲ್ಲಿ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಎಷ್ಟು ಜನರ ಮೇಲೆ ಕೇಸ್ ದಾಖಲಿಸಿ ಶಿಕ್ಷೆ ವಿಧಿಸಲಾಗಿದೆ? (ತಾಲ್ಲೂಕುವಾರು, ಪ್ರಕರಣವಾರು ಕಳೆದ ಐದು ವರ್ಷಗಳ ಮಾಹಿತಿ ನೀಡುವುದು) | ಇಂತಹ ಅಕ್ರಮವನ್ನು ತಡೆಗಟ್ಟಲು ಕಳ್ಳಭಟ್ಟಿ ಕೇಂದ್ರಗಳ ಮೇಲೆ ವ್ಯವಸ್ಥಿತವಾಗಿ ಅಬಕಾರಿ ದಾಳಿ ನಡೆಸಿ, ಕಳ್ಳಭಟ್ಟಿ ತಯಾರಿಕೆ ಪತ್ತೆ ಹಚ್ಚುವ ಹಾಗೂ ತಡೆಗಟ್ಟುವ ನಿಟ್ಟಿನಲ್ಲಿ ನಿರಂತರ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಕಳ್ಳಭಟ್ಟಿ ತಯಾರಿಕೆಗೆ ಬಳಸಲ್ಪಡುವ ಕಚ್ಚಾವಸ್ತುಗಳನ್ನು ಒದಗಿಸುವವರ ಮೇಲೂ ನಿಗಾ ಇಡಲಾಗಿದ್ದು, ಹಿಂದಿನ ಪ್ರಕರಣಗಳ ಪೂರ್ವಾಪರಾಧಿಗಳ ಚಲನ–ವಲನಗಳ ಬಗ್ಗೆ ಅಬಕಾರಿ ಗಸ್ತಿನ ವೇಳೆಯಲ್ಲಿ ನಿಗಾ ಇಡಲಾಗಿದೆ. ಸರ್ಕಾರಿ/ಅರಣ್ಯ ಪ್ರದೇಶಗಳಲ್ಲಿ ಕಳ್ಳಭಟ್ಟಿ ತಯಾರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಂದಾಯ/ಅರಣ್ಯ/ಪೊಲೀಸ್ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ, ಅಕ್ರಮವೆಸಗದಂತೆ ಕ್ರಮ ಜರುಗಿಸಲಾಗಿದೆ. ಹಾಗೆಯೇ ಹೊರ ರಾಜ್ಯಗಳಿಂದ ಅಕ್ರಮವಾಗಿ ಸಾಗಾಟವಾಗುವ ಕಳ್ಳಭಟ್ಟಿ ಸಾರಾಯಿಯನ್ನು ತಡೆಗಟ್ಟಲು ನಿಯಮಿತವಾಗಿ ರಸ್ತೆಗಾವಲು ಮತ್ತು ರಸ್ತೆ–ಗಸ್ತು ಕೈಗೊಂಡು ವಾಹನಗಳ ಹಾಗೂ ವ್ಯಕ್ತಿಗಳ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ. ನೆರೆಯ ರಾಜ್ಯಗಳ ಅಬಕಾರಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪೂರ್ವಾಪರಾಧಿಗಳ ಬಗ್ಗೆ |

| | | |
|---|---|---|
| | | ಮಾಹಿತಿ ವಿನಿಮಯ ಮಾಡಿ ಜಂಟಿ ಕಾರ್ಯಚರಣೆಯನ್ನು ನಡೆಸಲಾಗುತ್ತಿದೆ.<br><br>ಕಳೆದ ಐದು ವರ್ಷಗಳಲ್ಲಿ ಕಳ್ಳಭಟ್ಟಿ ಸಂಬಂಧ ರಾಜ್ಯದಲ್ಲಿ 4231 ಪ್ರಕರಣಗಳನ್ನು ದಾಖಲಿಸಿ, 1391 ಆರೋಪಿತರನ್ನು ದಸ್ತಗಿರಿಗೊಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿರುತ್ತದೆ. ಹೀಗೆ ದಾಖಲಿಸಲಾದ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ದಾಖಲಿಸಿದ ಪ್ರಕರಣದ ಜಿಲ್ಲಾವಾರು, ವಲಯವಾರು ವಿವರವನ್ನು **ಅನುಬಂಧ**ದಲ್ಲಿ ಇರಿಸಿದೆ. |

**ಆಇ 77 ಇಎಲ್‌ಕ್ಯೂ 2022**

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು.

**ಕೆ. ಗೋಪಾಲಯ್ಯ**
**ಅಬಕಾರಿ ಸಚಿವರು ಹಾಗೂ ಹಾಸನ ಮತ್ತು ಮಂಡ್ಯ**
**ಜಿಲ್ಲಾ ಉಸ್ತುವಾರಿ ಸಚಿವರು**

# ಅನುಬಂಧ

**2017-18 ನೇ ಸಾಲಿನಿಂದ 2021-22 ನೇ ಸಾಲಿನವರೆಗೆ ರಾಜ್ಯಾದ್ಯಂತ ಕಳ್ಳಭಟ್ಟಿ ಸಂಬಂಧ ದಾಖಲಿಸಿದ ಪ್ರಕರಣ ಹಾಗೂ ದಸ್ತಗಿರಿಗೊಳಪಡಿಸಲಾದ ಆರೋಪಿಗಳ ವಿವರ**

| ಕ್ರ.ಸಂ | ಜಿಲ್ಲೆ | ಉಪ ವಿಭಾಗ | ವಲಯ | ಕಳ್ಳಭಟ್ಟಿ ಸಂಬಂಧ ದಾಖಲಿಸಿದ ಪ್ರಕರಣಗಳ ಸಂಖ್ಯೆ | ದಸ್ತಗಿರಿಗೊಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾದ ಆರೋಪಿಗಳ ಸಂಖ್ಯೆ |
|---|---|---|---|---|---|
| 1 | Bagalkot | Bagalkot | Badami | 135 | 56 |
| 2 | Bagalkot | Bagalkot | Bagalkot | 294 | 120 |
| 3 | Bagalkot | Bagalkot | Bilagi | 166 | 87 |
| 4 | Bagalkot | Bagalkot | Hunagund | 146 | 40 |
| 5 | Bagalkot | Bagalkot | Jamakhandi | 111 | 39 |
| 6 | Bagalkot | Bagalkot | Mudhol | 95 | 53 |
| 7 | Ballari | Ballari | Ballari-1 | 13 | 2 |
| 8 | Ballari | Ballari | Ballari-2 | 26 | 18 |
| 9 | Ballari | Ballari | Sandur | 2 | 0 |
| 10 | Ballari | Ballari | Siruguppa | 2 | 3 |
| 11 | Ballari | Hosapete | Harappanahalli | 2 | 0 |
| 12 | Ballari | Hosapete | Hosapete-2 | 55 | 13 |
| 13 | Belagavi | Belagavi | Bailhongal | 31 | 11 |
| 14 | Belagavi | Belagavi | Belagavi North | 195 | 19 |
| 15 | Belagavi | Belagavi | Belagavi South | 65 | 12 |
| 16 | Belagavi | Belagavi | Khanapur | 7 | 1 |
| 17 | Belagavi | Chikkodi | Athani | 5 | 3 |
| 18 | Belagavi | Chikkodi | Chikkodi | 7 | 4 |
| 19 | Belagavi | Chikkodi | Hukkeri | 37 | 8 |
| 20 | Belagavi | Chikkodi | Raibag | 44 | 14 |
| 21 | Belagavi | Ramadurga | Gokak | 21 | 8 |
| 22 | Belagavi | Ramadurga | Ramdurga | 38 | 14 |
| 23 | Belagavi | Ramadurga | Savadatti | 30 | 11 |
| 24 | Belagavi North | Athani | Raibag | 13 | 1 |
| 25 | Belagavi North | Chikkodi | Chikkodi | 1 | 0 |
| 26 | Belagavi North | Chikkodi | Gokak | 4 | 1 |
| 27 | Belagavi North | Chikkodi | Hukkeri | 34 | 6 |
| 28 | Belagavi South | Belagavi | Belagavi Range-01 | 103 | 11 |
| 29 | Belagavi South | Belagavi | Belagavi Range-02 | 15 | 1 |
| 30 | Belagavi South | Belagavi | Belagavi Range-03 | 20 | 3 |
| 31 | Belagavi South | Belagavi | Khanapur | 5 | 0 |
| 32 | Belagavi South | Ramadurga | Bailhongal | 8 | 3 |
| 33 | Belagavi South | Ramadurga | Ramdurga | 8 | 1 |
| 34 | Belagavi South | Ramadurga | Savadatti | 2 | 0 |
| 35 | Bengaluru North | Yashwanthpur | Gokula | 1 | 0 |
| 36 | Bengaluru North | Yashwanthpur | T. Dasarahalli | 1 | 0 |
| 37 | Bidar | Bidar | Aurad | 77 | 18 |
| 38 | Bidar | Bidar | Basavakalyana | 8 | 2 |
| 39 | Bidar | Bidar | Bhalki | 41 | 8 |
| 40 | Bidar | Bidar | Bidar | 43 | 11 |
| 41 | BUD-01 | SUBDIV-01 | Yelahanka | 1 | 0 |

| ಕ್ರ.ಸಂ | ಜಿಲ್ಲೆ | ಉಪ ವಿಭಾಗ | ವಲಯ | ಕಳ್ಳಭಟ್ಟಿ ಸಂಬಂಧ ದಾಖಲಿಸಿದ ಪ್ರಕರಣಗಳ ಸಂಖ್ಯೆ | ದಸ್ತಗಿರಿಗೊಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾದ ಆರೋಪಿಗಳ ಸಂಖ್ಯೆ |
|---|---|---|---|---|---|
| 42 | Chamarajanagara | Chamarajanagara | Kollegala | 9 | 4 |
| 43 | Chikkaballapura | Chinthamani | Chinthamani | 4 | 2 |
| 44 | Chikkamagaluru | Chikkamagaluru | Chikkamagaluru | 172 | 39 |
| 45 | Chikkamagaluru | Chikkamagaluru | Kadoor | 1 | 0 |
| 46 | Chikkamagaluru | Chikkamagaluru | TARIKERE | 1 | 0 |
| 47 | Chikkamagaluru | Moodigere | Moodigere | 126 | 37 |
| 48 | Chitradurga | Chitradurga | Chitradurga | 1 | 0 |
| 49 | Chitradurga | Hiriyur | Hiriyur | 3 | 3 |
| 50 | Dakshina Kannada | Bantwal | Bantwal | 2 | 2 |
| 51 | Dakshina Kannada | Bantwal | Belthangady | 7 | 5 |
| 52 | Dakshina Kannada | Mangaluru 1 | Mangaluru East-1 | 1 | 0 |
| 53 | Dakshina Kannada | Mangaluru 1 | Mangaluru South-2 | 4 | 1 |
| 54 | Dakshina Kannada | Mangaluru 2 | Mangaluru East-2 | 2 | 0 |
| 55 | Dakshina Kannada | Puttur | Puttur | 3 | 2 |
| 56 | Dakshina Kannada | Puttur | Sullia | 5 | 1 |
| 57 | Davanagere | Davangere | Davanagere-1 | 6 | 1 |
| 58 | Davanagere | Davangere | Davanagere-2 | 28 | 5 |
| 59 | Dharwad | Dharwad | Dharwad | 7 | 6 |
| 60 | Dharwad | Dharwad | Kalghatagi | 1 | 0 |
| 61 | Dharwad | Dharwad | Kundgol | 1 | 1 |
| 62 | Dharwad | Dharwad | Navalgund | 13 | 13 |
| 63 | Gadag | Gadag | Gadag | 17 | 0 |
| 64 | Gadag | Gadag | Mundargi | 23 | 5 |
| 65 | Gadag | Gadag | Nargund | 11 | 0 |
| 66 | Gadag | Gadag | Rona | 81 | 4 |
| 67 | Gadag | Gadag | Shirahatti | 15 | 0 |
| 68 | Hassan | Hassan | Arasikere | 2 | 0 |
| 69 | Hassan | Hassan | Belur | 151 | 84 |
| 70 | Hassan | Sakleshpura | Arakalgud | 1 | 0 |
| 71 | Hassan | Sakleshpura | Holenarasipura | 1 | 0 |
| 72 | Hassan | Sakleshpura | Sakleshpura | 118 | 37 |
| 73 | Haveri | Haveri | Hangal | 25 | 18 |
| 74 | Haveri | Haveri | Haveri | 1 | 1 |
| 75 | Haveri | Haveri | Savanur | 1 | 0 |
| 76 | Haveri | Haveri | Shiggaon | 1 | 2 |
| 77 | Haveri | Ranebennur | Byadgi | 7 | 3 |
| 78 | Haveri | Ranebennur | Hirekerur | 29 | 5 |
| 79 | Haveri | Ranebennur | Ranebennur | 4 | 0 |
| 80 | Kalaburagi | Chittapur | Chincholi | 5 | 0 |
| 81 | Kalaburagi | Chittapur | Chittapur | 77 | 7 |
| 82 | Kalaburagi | Chittapur | Sedam | 49 | 3 |
| 83 | Kalaburagi | Kalaburagi | Aland | 8 | 2 |
| 84 | Kalaburagi | Kalaburagi | Jewargi | 2 | 0 |
| 85 | Kalaburagi | Kalaburagi | Kalaburagi-1 | 19 | 1 |
| 86 | Kalaburagi | Kalaburagi | Kalaburagi-2 | 1 | 0 |

| ಕ್ರ.ಸಂ | ಜಿಲ್ಲೆ | ಉಪ ವಿಭಾಗ | ವಲಯ | ಕಳ್ಳಭಟ್ಟಿ ಸಂಬಂಧ ದಾಖಲಿಸಿದ ಪ್ರಕರಣಗಳ ಸಂಖ್ಯೆ | ದಸ್ತಗಿರಿಗೊಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾದ ಆರೋಪಿಗಳ ಸಂಖ್ಯೆ |
|---|---|---|---|---|---|
| 87 | Kodagu | Madikeri | Madikeri | 10 | 7 |
| 88 | Kodagu | Somwarpet | Somwarpet | 22 | 1 |
| 89 | Kodagu | Virajpet | Virajpet | 6 | 1 |
| 90 | Kolar | KGF | Bangarpet | 10 | 10 |
| 91 | Kolar | KGF | Mulbagilu | 8 | 7 |
| 92 | Kolar | Kolar | Kolar | 1 | 0 |
| 93 | Kolar | Kolar | Malur | 1 | 0 |
| 94 | Kolar | Kolar | Shrinivaspura | 6 | 1 |
| 95 | Koppal | Koppal | Gangavathi | 5 | 3 |
| 96 | Koppal | Koppal | Koppal | 2 | 0 |
| 97 | Koppal | Koppal | Kustagi | 52 | 16 |
| 98 | Mysore Rural | Nanjanagud | H.D Kote | 1 | 0 |
| 99 | Raichur | Raichur | Lingasugur | 94 | 33 |
| 100 | Raichur | Raichur | Manvi | 69 | 9 |
| 101 | Raichur | Raichur | Raichur | 4 | 0 |
| 102 | Raichur | Raichur | Sindhanoor | 7 | 2 |
| 103 | Ramanagara | Ramanagar | Kanakapura | 1 | 0 |
| 104 | Shivamogga | Sagara | Sagara | 30 | 11 |
| 105 | Shivamogga | Sagara | Shikaripur | 96 | 8 |
| 106 | Shivamogga | Sagara | Soraba | 49 | 18 |
| 107 | Shivamogga | Thirthahalli | Hosanagara | 6 | 1 |
| 108 | Shivamogga | Thirthahalli | Thirthahalli | 2 | 0 |
| 109 | Tumakuru | Madhugiri | Pavagada | 8 | 0 |
| 110 | Tumakuru | Tiptur | Turuvekere | 1 | 0 |
| 111 | Udupi | Udupi | Udupi -2 | 5 | 2 |
| 112 | Uttara Kannada | Honnavar | Bhatkal | 27 | 15 |
| 113 | Uttara Kannada | Honnavar | Honnavar | 26 | 8 |
| 114 | Uttara Kannada | Honnavar | Kumta | 10 | 4 |
| 115 | Uttara Kannada | Karwar | Ankola | 9 | 5 |
| 116 | Uttara Kannada | Sirsi | Sirsi | 14 | 8 |
| 117 | Uttara Kannada | Yellapur | Dandeli | 6 | 2 |
| 118 | Uttara Kannada | Yellapur | Yellapur | 5 | 4 |
| 119 | Vijayapura | Vijayapura | Basavanabagiwadi | 224 | 113 |
| 120 | Vijayapura | Vijayapura | Indi | 24 | 20 |
| 121 | Vijayapura | Vijayapura | Muddebihal | 73 | 46 |
| 122 | Vijayapura | Vijayapura | Sindagi | 8 | 6 |
| 123 | Vijayapura | Vijayapura | Vijayapura | 206 | 121 |
| 124 | Yadgir | Shahapur | Shahapur | 60 | 6 |
| 125 | Yadgir | Shahapur | Surapur | 20 | 1 |
| 126 | Yadgir | Shahapur | Yadgir | 65 | 6 |
| **Total** | | | | **4231** | **1391** |

**ಆಇ 77 ಇಎಲ್ ಕ್ಯೂ 2022**